"ನಿಮ್ಮ ಕೆಲಸ ನೀವು ನೋಡಿ! ಬೇಕು ಅನ್ನಿಸಿದಾಗ ನಿಮ್ಮ ಸಲಹೆ ಪಡೀತೀನಿ. ನಿಮ್ಮಂತಹವರಿಂದಲೇ, ಈ ಕಾಫೀರರು ಬಿಳಿಯರಂತೆ ಹೆಚ್ಚಿಕೊಂಡಿರೋದು!"

ಆಗ ಕಾರ್ಲಿಯನ್ನು ಕುರಿತು ''ಎದ್ದೇಳು, ನೀನು!...''

"ಅವನ ಹತ್ರ ಸರಿಯಾಗಿ ಗೌರವದಿಂದ ನಡ್ಕೊಳ್ಳಿ."

ಪೊಲೀಸನು ಕೋಪದಿಂದ ಕೆಂಪಾದ, "ಇದು...." ಅವನಿಗೆ ಶಬ್ದಗಳೇ ಹೊರಡುತ್ತಿರಲಿಲ್ಲ.

"ಆ ಅನಾಗರಿಕನಿಗೆ ಒದೆಯಿರಿ, ಇನ್ನೂ ಎದ್ದೇಳದಿದ್ದರೆ" ಓರ್ವ ಪ್ರೇಕ್ಷಕ ಕೂಗಿದ. ಒರಟಾಗಿ ಓರ್ವ ಬಿಳಿಯ ಕಾರ್ಲಿಯ ಮೇಲೆ ಕೈ ಮಾಡಿದ. "ಏಳೋ ಸೂಳೆಮಗನೇ!"

ಕಾರ್ಲಿ ಪ್ರತಿರೋಧ ಒಡ್ಡುತ್ತಾ, ಬೆಂಚನ್ನು ಆತುಕೊಳ್ಳುತ್ತಾ ತಿರುಗಿದ. ಈಗ ಅವನ ಮೇಲೆ ಕೈ ಮಾಡಿ ಎಳೆದು ಹಾಕಲು ಒಬ್ಬರಿಗಿಂತ ಹೆಚ್ಚು ಜನ ಇದ್ದರು. ಅವನು ಅದನ್ನು ಒರಟಾಗಿ ಎದುರಿಸಿದ, ಆದರೆ, ಯಾರೋ ಅವನ ಮುಖಕ್ಕೆ ಗುದ್ದಿದಾಗ ಸಾಕಷ್ಟು ನೋವಾಯಿತು. ಈಗ ರಕ್ತ ಕಾರುತ್ತ ಕೆಂಪು ಕಣ್ಣಿನಿಂದ ದಿಟ್ಟಿಸಿದ, ಆದರೂ ಅವನು ಹೋರಾಟ ಮುಂದುವರಿಸುತ್ತಲೇ ಇದ್ದ. ಕಾನ್‌ಸ್ಟೆಬಲ್ ಅವನ ಕೈಗೆ ಕೋಳ ತೊಡಿಸಲು ಗುಂಪಿನಲ್ಲಿ ನುಸುಳುತ್ತಾ ಬಂದ. ಕಾರ್ಲಿ ಇನ್ನೂ ಬಿಡಿಸಿಕೊಳ್ಳಲು ಹೆಣಗಾಡುತ್ತಿದ್ದ. ಅವನ ಮೇಲೆ ಒಂದೆರೆಡು ಏಟುಗಳೂ ಬಿದ್ದವು. ತಕ್ಷಣ ಅವನು ಹಿಂದೆ ಸರಿದು ನಿಧಾನವಾಗಿ ಬಿಡಿಸಿಕೊಳ್ಳಲು ಯತ್ನಿಸಿದ. ಇನ್ನು ಮುಂದೆ ಹೋರಾಟ ಮಾಡುವುದು ವ್ಯರ್ಥ ಎಂದು ಮನಗಂಡ. ಈಗ ನಗುವುದು ಅವನ ಪಾಳಿಯಾಗಿತ್ತು. ಅವನು ಸವಾಲು ಎಸೆದು ಹೋರಾಡಿ ಗೆದ್ದಿದ್ದ. ಫಲಶ್ರುತಿ ಬಗ್ಗೆ ಯಾರು ತಲೆಕೆಡಿಸಿಕೊಳ್ಳುತ್ತಾರೆ?

"ಬಾ... ಏ ಹಂದಿ!'' ಕಾರ್ಲಿಯನ್ನು ಗುಂಪಿನ ಮಧ್ಯೆ ಎಳೆದಾಡುತ್ತಾ ಪೊಲೀಸ್ ಹೇಳಿದ.

"ಖಂಡಿತ" ಕಾರ್ಲಿ ಮೊದಲ ಬಾರಿಗೆ ಮಾತನಾಡಿದ, ಯೂರೋಪಿಯನ್ನರ ಬೆಂಚಿನ ಮೇಲೆ ಕುಳಿತುಕೊಳ್ಳುವ ಧಾಷ್ಟ್ರ್ಯವನ್ನು ತೋರಿದ ದರ್ಪದಿಂದ, ಪೊಲೀಸನ ಕಡೆ ದಿಟ್ಟಿಸುತ್ತಾ.

## ರಿಚರ್ಡ್ ರೈವ್

ದಕ್ಷಿಣ ಆಫ್ರಿಕಾದ ಪ್ರಮುಖ ಲೇಖಕ. 1931ರಲ್ಲಿ ಕೇಪ್‌ಟೌನ್‌ನಲ್ಲಿ ಹುಟ್ಟಿದ ರೈವ್, ಚಿಕ್ಕ ವಯಸ್ಸಿನಲ್ಲಿ ಕತೆಗಳನ್ನು ಬರೆಯಲು ಆರಂಭಿಸಿದರು. ಆಫ್ರಿಕಾದ ಕೇಪ್‌ಟೌನ್ ವಿಶ್ವವಿದ್ಯಾಯದ ಪದವಿಯ ಬಳಿಕ ಅಮೆರಿಕ ಮತ್ತು ಇಂಗ್ಲೆಂಡ್‌ನಲ್ಲಿ ಉನ್ನತ ಶಿಕ್ಷಣ ಪಡೆದರು. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆದು, ಕೇಪ್‌ಟೌನ್‌ಗೆ ಮರಳಿ ಬೋಧನೆಯಲ್ಲಿ ತೊಡಗಿಸಿಕೊಂಡರು. ಈ ಲೇಖಕನ ಬರಹಗಳು ದಕ್ಷಿಣ ಆಫ್ರಿಕಾದ ಜನರು ಅನುಭವಿಸಿದ ಸಮಸ್ಯೆಗಳು ಹಾಗೂ ಬವಣೆಯ ಕುರಿತಾಗಿವೆ.

## ಎಂ.ಎಸ್. ರಘುನಾಥ್

ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರಾಗಿ ನಿವೃತ್ತರು. ಇಂಗ್ಲಿಷ್ ಹಾಗೂ ಕನ್ನಡ ಭಾಷೆಗಳ ನಡುವೆ ಅನುವಾದ ಮಾಡುತ್ತ ಬಂದಿದ್ದಾರೆ. ಅಮಿತಾವ್ ಘೋಷ್ ಅವರ ಕಾದಂಬರಿ 'ಶಾಡೋ ಲೈನ್ಸ್' ಅನ್ನು ಕನ್ನಡಕ್ಕೆ 'ನೆರಳಿನ ರೇಖೆಗಳು' ಎಂಬ ಹೆಸರಿನಲ್ಲಿ ಅನುವಾದಿಸಿದ್ದಾರೆ. ಕೆ.ಎಸ್. ನಿಸಾರ್ ಅಹಮದ್ ಅವರ ಆಯ್ದ ಕವಿತೆಗಳನ್ನು ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ ಮತ್ತು ಅವರ ನೂರು ಕವಿತೆಗಳ ಇಂಗ್ಲಿಷ್ ಅನುವಾದವನ್ನು ಸಿ.ಎನ್. ರಾಮಚಂದ್ರನ್ ಅವರೊಂದಿಗೆ ಸಂಪಾದಿಸಿದ್ದಾರೆ.